ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 12-11-2016

# ಪತ್ರಿಕಾ ಆಮಂತ್ರಣ

1. ಮಕ್ಕಳ ಹಬ್ಬ – 2016 :
   ಉದ್ಘಾಟನೆ: ಸಿದ್ದರಾಮಯ್ಯ,
   ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.
   ಅಧ್ಯಕ್ಷತೆ: ಆರ್. ರೋಷನ್ ಬೇಗ್,
   ನಗರಾಭಿವೃದ್ಧಿ ಮತ್ತು ಹಜ್ ಸಚಿವರು.
   ದಿನಾಂಕ: 13–11–2016, ಭಾನುವಾರ, ಸಮಯ: ಬೆಳಿಗ್ಗೆ 11.00 ಗಂಟೆಗೆ
   ಸ್ಥಳ: ಬ್ಯಾಂಡ್‌ಸ್ಟ್ಯಾಂಡ್, ಕಬ್ಬನ್ ಉದ್ಯಾನವನ, ಬೆಂಗಳೂರು.

3. ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ 2014–2015
   ಉದ್ಘಾಟನೆ: ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
   ಮುಖ್ಯ ಅತಿಥಿ: ಶ್ರೀ ಕೆ.ಜೆ. ಜಾರ್ಜ್, ಬೆಂಗಳೂರು ಅಭಿವೃದ್ಧಿ ಮತ್ತು ನಗರ .
   . . ಯೋಜನಾ ಸಚಿವರು
   ಸ್ಥಳ: ಡಾ: ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ
   ಗಾಂಧೀ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಬಳ್ಳಾರಿ ರಸ್ತೆ, ಬೆಂಗಳೂರು
   ಸಮಯ: 13–11–2016 ಭಾನುವಾರ ಸಂಜೆ 6–00 ಗಂಟೆಗೆ

4. ವಿಶ್ವ ಮಧು ಮೇಹ ದಿನ ಮತ್ತು ವಿಶ್ವ ದೃಷ್ಟಿ ದಿನಾಚರಣೆ ಜಾಥಾ
   ಉದ್ಘಾಟನೆ:
   ಶ್ರೀ ಕೆ.ಆರ್. ರಮೇಶ್‌ಕುಮಾರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಹಾಗೂ ಡಾ: ಶರಣಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವರು
   ಸ್ಥಳ: ಮಿಂಟೋ ಕಣ್ಣಿನ ಆಸ್ಪತ್ರೆ, ಬೆಂಗಳೂರು
   ದಿನಾಂಕ: 14–11–2016 ರಂದು ಬೆಳಿಗ್ಗೆ 9–00 ಗಂಟೆಗೆ

5. ದಿವಂಗತ ಜವಾಹರ್ ಲಾಲ್ ನೆಹರುರವರ 127 ನೇ ಜನ್ಮದಿನ:

ಮಾಲಾರ್ಪಣೆ:

ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ: 14–11–2016, ಸೋಮವಾರ, ಸಮಯ ಬೆಳಿಗ್ಗೆ 9–30 ಗಂಟೆಗೆ

ಸ್ಥಳ: ವಿಧಾನಸೌಧ ಪಶ್ಚಿಮ ದಿಕ್ಕಿನಲ್ಲಿರುವ ಅವರ ಪ್ರತಿಮೆ ಅವರ ಭಾವಚಿತ್ರಕ್ಕೆ, ವಿಧಾನಸೌಧ, ಬೆಂಗಳೂರು.

6. ಮಕ್ಕಳ ಚಿತ್ರಕಲಾ ಶಿಬಿರ:

ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಮಕ್ಕಳ ಚಿತ್ರಕಲಾ ಶಿಬಿರ

ದಿ: 14–11–2016 ರಂದು ಬೆಳಿಗ್ಗೆ 10–00 ಗಂಟೆಗೆ

ಸ್ಥಳ: ಶಿಲ್ಪವನ, ರವೀಂದ್ರ ಕಲಾಕ್ಷೇತ್ರ ಆವರಣ, ಬೆಂಗಳೂರು

7. ಮಕ್ಕಳ ದಿನಾಚರಣೆ – 2016 :

ಉದ್ಘಾಟನೆ: ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

ಅಧ್ಯಕ್ಷತೆ: ಆರ್. ರೋಷನ್ ಬೇಗ್, ನಗರಾಭಿವೃದ್ಧಿ ಮತ್ತು ಹಜ್ ಸಚಿವರು.

ದಿನಾಂಕ: 14–11–2016, ಸೋಮವಾರ, ಸಮಯ ಬೆಳಿಗ್ಗೆ 11.00 ಗಂಟೆಗೆ

ಸ್ಥಳ: ಬಾಲಭವನ ಆಡಿಟೋರಿಯಂ, ಕಬ್ಬನ್ ಉದ್ಯಾನವನ, ಬೆಂಗಳೂರು.

8. ಪತ್ರಿಕಾಗೋಷ್ಠಿ:

ಎಂ.ಆರ್. ವೆಂಕಟೇಶ್, ಅಧ್ಯಕ್ಷರು

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ,

ಬೆಂಗಳೂರು

ದಿನಾಂಕ: 14–11–2016, ಸೋಮವಾರ, ಸಮಯ ಮಧ್ಯಾಹ್ನ 12–30 ಗಂಟೆಗೆ

ಸ್ಥಳ: ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ,

ಸಂಪಂಗಿರಾಮನಗರ ಪೊಲೀಸ್ ಠಾಣೆ ಎದರು,

ಬೆಂಗಳೂರು.

## ಪತ್ರಿಕಾ ಪ್ರಕಟಣೆ

# ನಗರದಲ್ಲಿ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ)

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖಾವತಿಯಿಂದ 2014 – 2015 ನೇ ಸಾಲಿನ ರಾಜ್ಯ ಚಲನಚಿತ್ರ ಪಶಸ್ತಿ ಪ್ರದಾನ ಸಮಾರಂಭವನ್ನು ನವೆಂಬರ್ 13 ರ ಭಾನುವಾರದಂದು ಸಂಜೆ 6–00 ಗಂಟೆಗೆ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರ ರಾಷ್ಟ್ರೀಯ ಸಮಾವೇಶ ಭವನ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, (ಜಿಕೆವಿಕೆ) ಬೆಂಗಳೂರು ಇಲ್ಲಿ ಹಮ್ಮಿಕೊಂಡಿದೆ.**

**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂದು ಪ್ರಶಸ್ತಿ ಪ್ರದಾನ ಮಾಡುವರು. ಕೇಂದ್ರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವ ಡಿ.ವಿ. ಸದಾನಂದ ಗೌಡ ಅವರು ಗೌರವ ಉಪಸ್ಥಿತಿಯಾಗಿ ಪಾಲ್ಗೊಳ್ಳುವರು. ಕೃಷಿ ಸಚಿವ ಕೃಷ್ಣ ಭೈರೇಗೌಡ ಸಮಾರಂಭದ ಅಧ್ಯಕ್ಷತೆಯನ್ನು ಅವರು ವಹಿಸುವರು.**

**ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವ ಕೆ.ಜೆ. ಜಾರ್ಜ್, ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಮಹಾಪೌರರಾದ ಶ್ರೀಮತಿ ಜಿ. ಪದ್ಮಾವತಿ, ವಿಧಾನ ಪರಿಷ್ ಸದಸ್ಯ ಹಾಗೂ ಮುಖ್ಯಮಂತ್ರಿಯವರ ಸಂಸದೀಯ ಕಾರ್ಯದರ್ಶಿ ಕೆ. ಗೋವಿಂದರಾಜ್, ವಿಧಾನ ಪರಿಷತ್ ಸದಸ್ಯರುಗಳಾದ ಬಿ.ಜೆ. ಪುಟ್ಟಸ್ವಾಮಿ, ಪುಟ್ಟಣ್ಣ ಹಾಗೂ ಬಿ.ಎಸ್. ಸುರೇಶ್ ಅವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು.**

**ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಎಸ್. ವಿ. ರಾಜೇಂದ್ರಸಿಂಗ್ ಬಾಬು, ಶ್ರೀ ಕಂಠೀರವಣ ಸ್ಟುಡಿಯೋಸ್ ನಿಯಮಿತ ಅಧ್ಯಕ್ಷ ಶ್ರೀಮತಿ ಅಶ್ವಿನಿ ಕೃಷ್ಣಮೂರ್ತಿ ಹಾಗೂ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಸಾ.ರಾ. ಗೋವಿಂದು ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು.**

**ಈ ಸಂದರ್ಭದಲ್ಲಿ ಡಾ. ಶಮಿತಾ ಮಲ್ನಾಡ್ ಅವರು ಚಲನಚಿತ್ರ ಗೀತೆಗಳನ್ನಾಧರಿಸಿದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಎನ್.ಆರ್. ವಿಶುಕುಮಾರ್ ತಿಳಿಸಿದ್ದಾರೆ.**

ಎಸ್ಎಂ::ಜಿಪಿಆರ್.

# ಅಪರಾಧಿಗಳು ತಮ್ಮ ಮನೋಭಾವನೆಗಳನ್ನು ಬದಲಾಯಿಸಿಕೊಂಡಲ್ಲಿ ಮಾತ್ರ ಸಮಾಜ ಮುಖಿಯಾಗಲು ಸಾಧ್ಯ

ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ)

ಅಪರಾಧಿಗಳು ತಮ್ಮ ಮನೋಭಾವನೆಗಳನ್ನು ನಿಜವಾಗಿಯೂ ಬದಲಾಯಿಸಿಕೊಂಡಲ್ಲಿ ಮಾತ್ರ ಸಮಾಜ ಮುಖಿಯಾಗಿ ಹೊರಬರಲು ಸಾಧ್ಯವೆಂದು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀ ಕೆ.ಎನ್ ಫಣೀಂದ್ರ ಅವರು ಅಭಿಪ್ರಾಯಪಟ್ಟರು.

ಇಂದು ಸಂಜೆ ಕಾರಾಗೃಹಗಳ ಇಲಾಖೆಯು ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆಗೆ ಒಳಪಟ್ಟಿರುವ ಅಪರಾಧಿಗಳ ಅವಧಿಪೂರ್ವ ಬಿಡುಗಡೆಗೆ ಮುಂಚಿತವಾಗಿ ಅವರನ್ನು ಬಾಹ್ಯ ಪ್ರಪಂಚಕ್ಕೆ ಹೊಂದಾಣಿಕೆಯಾಗುವಂತೆ ಮಾಡುವ ಮೂಲಕ ಅವರ ಮುಂದಿನ ಭವಿಷ್ಯದ ಜೀವನ ಉತ್ತಮ ರೀತಿಯಲ್ಲಿರುವಂತೆ ಅಣಿಗೊಳಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಶಿಬಿರವಾದ "ರೂಪಾಂತರ" ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತಾಡಿದರು.

ಮನುಷ್ಯರೆಲ್ಲರಲ್ಲೂ ಅರಿಷಡ್ವರ್ಗ ಗುಣಗಳಿರುತ್ತವೆ, ಎಲ್ಲಾ ಗುಣಗಳನ್ನು ಹಿಡಿತದಲ್ಲಿಟ್ಟು ಕೊಳ್ಳುವವರು ಮಾನವನಾಗಿರುತ್ತಾನೆ. ಅರಿಷಡ್ವರ್ಗ ಗುಣಗಳಲ್ಲಿ ಒಂದಾದ ರಾಕ್ಷಸ ಗುಣವನ್ನು ಹತೋಟಿಯಲ್ಲಿಟ್ಟುಕೊಳ್ಳದೆ ಕೆಲವರು ಉದ್ರೇಕದಲ್ಲಿ ಸಿಟ್ಟಿಗೆ ಬುದ್ದಿ ಕೊಟ್ಟು ಕ್ಷಣಾರ್ಧದಲ್ಲಿ ಅಪರಾಧವನ್ನು ಮಾಡಿರುತ್ತಾರೆ.

ಯಾರಿಗೂ ಅಪರಾಧ ಮಾಡಬೇಕೆಂಬ ಉದ್ದೇಶವಿರುವುದಿಲ್ಲ. ಶೇಕಡ 80 ರಷ್ಟು ಅಪರಾಧಗಳು ಅನಿರೀಕ್ಷಿತವಾಗಿ ಸಂದರ್ಭದ ಒತ್ತಡದಲ್ಲಿ ಅಪರಾಧವಾಗಿರುತ್ತದೆ. ಆದ್ದರಿಂದ ಭಾವೊದ್ವೇಗಕ್ಕೆ ಒಳಗಾಗದೇ ಸಿಟ್ಟಿನ ಕೈಗೆ ಬುದ್ದಿಯನ್ನು ಕೊಡದೆ ಬುದ್ದಿಯ ಕೈಗೆ ಸಿಟ್ಟನ್ನು ಕೊಡಬೇಕು. ಹಾಗೆಯೇ ನಮ್ಮ ಹಕ್ಕು ಮತ್ತು ಭಾದ್ಯತೆಗಳಿಗೆ ಹೇಗೆ ಪ್ರಾಮುಖ್ಯತೆ ಕೊಡುತ್ತೇವೆಯೋ ಅದೇ ರೀತಿ ಇತರರ ಹಕ್ಕು ಮತ್ತು ಭಾದ್ಯತೆಗಳ ಬಗ್ಗೆ ಗೌರವ ತೋರಿಸ ಬೇಕೆಂದು ನ್ಯಾಯಾಧೀಶರು ಮನವಿ ಮಾಡಿದರು.

ತಮ್ಮ ನಡತೆಯನ್ನು ತಿದ್ದುಕೊಳ್ಳುವ ಮೂಲಕ ಉತ್ತಮ ಗುಣಗಳನ್ನು ಬೆಳಿಸಿಕೊಂಡಿರುವ ನೀವು ಸಮಾಜದ ಜನರು ಯಾರು ಏನೇ ಅಂದರು ಪರವಾಗಿಲ್ಲ, ಇನ್ನು ಮುಂದೆ ನಾನು ಹೀಗೆ ಇರುತ್ತೇನೆಂದು ಮನಸ್ಸು ಮಾಡಿ. ನೀವು ಸಮಾಜವನ್ನು ಹೇಗೆ ಸ್ವೀಕರಿಸುತ್ತೀರೋ ಹಾಗೆಯೇ ಸಮಾಜ ಕೂಡ ನಿಮ್ಮನ್ನು ಸ್ವೀಕರಿಸುತ್ತದೆ. ನಾಲ್ಕು

ಜನರೊಂದಿಗೆ ಸಹಬಾಗಿತ್ವದಲ್ಲಿ ಹೇಗೆ ಇರುತ್ತೇವೆಂದು ನಮ್ಮನ್ನು ನಾವು ರೂಪಿಸಿಕೊಳ್ಳುವುದೇ ಈ ರೂಪಾಂತರವಾಗಿದೆ ಎಂದರು.

ಅದೇ ರೀತಿಯಲ್ಲಿ ಶಿಕ್ಷೆಯನ್ನು ಅನುಭವಿಸಿ ಸನ್ನಡತೆ ಆಧಾರದಲ್ಲಿ ಬಿಡುಗಡೆಯಾಗುವ ಇವರೊಂದಿಗೆ ಸಮಾಜದ ಜನರು ಕೂಡ ಉತ್ತಮ ರೀತಿಯಲ್ಲಿ ಹೊಂದಿಕೊಂಡು ಹೋಗಲು ಅವಕಾಶ ಮಾಡಿಕೊಡುವಂತೆ ಸಾರ್ವಜನಿಕರಿಗೂ ಜಾಗೃತಿಯನ್ನು ಮೂಡಿಸುವುದು ಅವಶ್ಯಕವಾಗಿದೆ, ಅದಕ್ಕಾಗಿ ಕಾನೂನು ಸೇವ ಪ್ರಾಧಿಕಾರದ ಸಹಕಾರವನ್ನು ಪಡೆದುಕೊಳ್ಳುವಂತೆ ಅವರು ಕರ್ನಾಟಕ ಕಾರಾಗೃಹಗಳ ಮಹಾ ನಿರೀಕ್ಷಕ ಹೆಚ್.ಎನ್. ಸತ್ಯನಾರಾಯಣ ರಾವ್ ಅವರಿಗೆ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಗೃಹ ಸಚಿವ ಡಾ॥ ಜಿ.ಪರಮೇಶ್ವರ ಅವರು ಮಾತನಾಡಿ, ದೇಶದಲ್ಲಿಯೇ ಪ್ರಥಮ ಕಾರ್ಯಕ್ರಮವಾಗಿರುವ ಈ ರೂಪಾಂತರವು ಒಂದು ಹೊಸ ಪ್ರಯತ್ನವಾಗಿದೆ. ಈ ಹಿಂದೆ ಅಪರಾಧಿಗಳನ್ನು ಬಿಡುಗಡೆಗೊಳಿಸಿದ್ದ ಸಂದರ್ಭದಲ್ಲಿ ಕೆಲವು ಅಪರಾಧಿಗಳಿಗೆ ಬಾಹ್ಯ ಜೀವನದಲ್ಲಿ ತಮ್ಮ ಭವಿಷ್ಯವನ್ನು ಮತ್ತೆ ಕಟ್ಟಿಕೊಳ್ಳಲು ಕಷ್ಟವಾಗಿತ್ತು ಎಂಬ ವಿಷಯವು ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು. ಈ ಹಿನ್ನೆಲೆಯಲ್ಲಿ ಇದಕ್ಕೆ ಉತ್ತರ ಹುಡುಕುತ್ತಿರುವಾಗ ಸತ್ಯನಾರಾಯಣ ರಾವ್ ಅವರು ರೂಪಾಂತರ ಕಾರ್ಯಕ್ರಮದ ಮೂಲಕ ಇದಕ್ಕೆ ಉತ್ತರವನ್ನು ಕಂಡುಹಿಡಿದಿದ್ದಾರೆ ಎಂದರು.

ರಾಜ್ಯಾದ್ಯಂತ 230 ಅಪರಾಧಿಗಳು ಸನ್ನಡತೆ ಆಧಾರದಲ್ಲಿ ಜನವರಿ 26 ರಂದು ಬಿಡುಗಡೆಯಾಗಲು ಸಿದ್ದರಾಗಿದ್ದು, ಪರಪ್ಪನ ಅಗ್ರಹಾರದಲ್ಲಿ 78 ಅಪರಾಧಿಗಳಿಗೆ ಜನವರಿ 1 ರ ವರೆಗೆ ಪೀಸ್‌ಮೇಕರ್ಸ್ ಎಂಬ ಸ್ವಯಂ ಸೇವಾ ಸಂಸ್ಥೆಯ ಸಹೋಗತ್ವದಲ್ಲಿ ಅಪರಾಧಿಗಳಿಗೆ ಅವಧಿಪೂರ್ವ ಬಿಡುಗಡೆಗೂ ಮುಂಚಿತವಾಗಿ ಬಾಹ್ಯ ಜೀವನಕ್ಕೆ ಸಜ್ಜುಗೊಳಿಸುವುದೆಂದರು.

ಅಪರಾಧಿಗಳ ಮನ ಪರಿವರ್ತನೆ ಮಾಡಲು ಕೌನ್ಸಿಲರ್‌ಗಳ ಅವಶ್ಯಕತೆ ಇದೆ. ಖಾಸಗಿ ಕಾರಣ ಮತ್ತು ಕೆಲಸದ ಒತ್ತಡದಿಂದ ಪೊಲೀಸ್ ಅಧಿಕಾರಿಗಳೇ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಅವರಿಗೆ ಮಾನಸಿಕ ಸ್ಥೈರ್ಯ ತುಂಬಲು ಪೊಲೀಸ್ ಇಲಾಖೆಗೆ 180 ಕೌನ್ಸಿಲರ್ ಗಳನ್ನು ನೇಮಿಸಿಕೊಳ್ಳಲು ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಕಾರಾಗೃಹ ಇಲಾಖೆಯ ಕೂಡ ಪ್ರಸ್ತಾವನೆ ಸಲ್ಲಿಸಿದಲ್ಲಿ ಕೌನ್ಸಿಲರ್ ಗಳ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದೆಂದರು.

ಕಾರ್ಯಕ್ರಮಕ್ಕೂ ಮುಂಚೆ ಮಾತಾಡಿದ ಕರ್ನಾಟಕ ಕಾರಾಗೃಹಗಳ ಮಹಾ ನಿರೀಕ್ಷಕ ಹೆಚ್.ಎನ್. ಸತ್ಯನಾರಾಯಣ ರಾವ್ ಅವರು ಚರಿತ್ರೆಯಲ್ಲಿ ನೆನಪಿಡಬೇಕಾದ ದಿನವಿದು.

ದೇಶದಲ್ಲೇ ಮೊದಲ ಬಾರಿಗೆ ಇಂತಹ ಕಾರ್ಯಕ್ರಮವನ್ನು ಕಾರಾಗೃಹ ಇಲಾಖೆಯು ಹಮ್ಮಿಕೊಂಡಿದೆ. ಈ ಮೊದಲು ಅಪರಾಧಿಗಳಿಗೆ ಕೌಶಲ್ಯ ತರಬೇತಿಯನ್ನು ಮಾತ್ರ ನೀಡಲಾಗುತಿತ್ತು. ಆದರೆ ಕಾರ್ಯಕ್ರಮದಲ್ಲಿ ವೈಯುಕ್ತಿಕ ಚಿತ್ರಣ, ಬಿಡುಗಡೆಗಾಗಿ ದೈಹಿಕ ಸಿದ್ದತೆ, ಮಾನಸಿಕ ಹಾಗೂ ಭಾವನಾತ್ಮಕ ಸಿದ್ದತೆ, ಸಾಮಾಜಿಕ ಸಿದ್ದತೆ, ಆದ್ಯಾತ್ಮಿಕ ಸಿದ್ದತೆ ಹಾಗೂ ಅನುಪಾಲನೆ ನೆರವುಗಳ ಬಗ್ಗೆ ಅಪರಾಧಿಗಳಿಗೆ ತಿಳಿಸುವ ಮೂಲಕ ಕಾರಾಗೃಹವಾಸದ ಜೀವನದಿಂದ ರೂಪಾಂತರಗೊಳಿಸಿ ಮುಂದೆ ಉತ್ತಮ ಜೀವನವನ್ನು ನಡೆಸಲು ಮತ್ತು ಪರಿಪೂರ್ಣವಾಗಿ ಬದುಕನ್ನು ಕಟ್ಟಿಕೊಳ್ಳುವಂತೆ ಮಾಡಲಾಗುವುದೆಂದರು.

ಕಾರಾಗೃಹ ಇಲಾಖೆಯಲ್ಲಿ ಖಾಲಿ ಇದ್ದ 2000 ವಿವಿಧ ಹುದ್ದೆಗಳಲ್ಲಿ 1811 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. ಹಾಗೆಯೇ ಎಲ್ಲಾ ಜಿಲ್ಲಾ ಕಾರಾಗೃಹಗಳಲ್ಲಿ ಸಿ.ಸಿ.ಟಿ.ವಿ ಮತ್ತು ವಿಡಿಯೋಕಾನ್ಫರೆನ್ಸ್ ವ್ಯವಸ್ಥೆಯನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಪೀಸ್ ಮೇಕರ್ಸ್ ನ ನಿರ್ದೇಶಕ ರಬ್ಬಿ ಜಯಕರನ್ ಅವರು ವಂದಿಸಿದರು ಕಾರಾಗೃಹ ಇಲಾಖೆಯ ಎ.ಐ.ಜಿ ವೀರಬದ್ರಸ್ವಾಮಿ ಮತ್ತು ಚೀಫ್ ಸೂಪರಿಂಡೆಂಟ್ ಕೃಷ್ಣ ಕುಮಾರ್ ಉಪಸ್ಥಿತರಿದ್ದರು.

ಬಿ.ಜಿ.ಪಿ

# Press Note

**All post Offices will function on 13-11-2016 (Sunday) for acceptance of Savings Bank deposit and exchange of currencies with the WOS Series. Further in the last two days viz. 10-11-2016 and 11-11-2016, Post offices in Karnataka have collected Rs. 362 Crores towards Savings Scheme deposits in Wos currencies.**